# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1485
2. ಸದಸ್ಯರ ಹೆಸರು : ಶ್ರೀ ಕೆ ಅಬ್ದುಲ್ ಜಬ್ಬರ್
3. ಉತ್ತರಿಸಬೇಕಾದ ದಿನಾಂಕ : 18.12.2025
4. ಉತ್ತರಿಸುವ ಸಚಿವರು : ಸಣ್ಣ ನೀರಾವರಿ, ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು.

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಕಳೆದ 2 ವರ್ಷಗಳಲ್ಲಿ ನೀರಾವರಿ ಪಂಪ್ (ಐಪಿ) ಸೆಟ್ ಯೋಜನೆಯನ್ನು ಪಡೆಯಲು ರಾಜ್ಯದ ಸಣ್ಣ ಮತ್ತು ಅತಿ ಸಣ್ಣ ಹಿಡುವಳಿ ರೈತರು ಸಲ್ಲಿಸಿರುವ ಅರ್ಜಿಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ತಾಲೂಕುವಾರು ಮಾಹಿತಿ ಒದಗಿಸುವುದು)</td><td rowspan="4">ಸಣ್ಣ ನೀರಾವರಿ ಇಲಾಖೆಯಿಂದ ರೈತರಿಗೆ ನೀರಾವರಿ ಪಂಪ್ (ಐಪಿ) ಸೆಟ್ ನೀಡುವ ಯೋಜನೆ ಇರುವುದಿಲ್ಲ.<br><br>ಆದರೆ, ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡದ ರೈತರ ಕೃಷಿ ಜಮೀನಿಗೆ ಕೊಳವೆ ಬಾವಿ ಮೂಲಕ ನೀರಾವರಿ ಸೌಲಭ್ಯ ಒದಗಿಸುವ ಕಾಮಗಾರಿಗಳನ್ನು ಸಂಬಂಧಿತ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರು ಸಲ್ಲಿಸುವ ಫಲಾನುಭವಿ ಪಟ್ಟಿಗಳನ್ವಯ ಆಯ್ಕೆ ಮಾಡಲಾಗುತ್ತಿದೆ.<br><br>ಹೀಗೆ ಆಯ್ಕೆ ಮಾಡಿದ ಫಲಾನುಭವಿಗಳ ಕೃಷಿ ಜಮೀನುಗಳಲ್ಲಿ ಕೊಳವೆ ಬಾವಿ ಕೊರೆದು, ಪಂಪು, ಮೋಟಾರ್ ಮತ್ತು ಕಂಟ್ರೋಲ್ ಬೋರ್ಡ್‌ಗಳನ್ನು ಸಣ್ಣ ನೀರಾವರಿ ಇಲಾಖೆಯಿಂದ ಅಳವಡಿಸಲಾಗುತ್ತಿದೆ.<br>ವಿದ್ಯುತ್ ಸಂಪರ್ಕ ಕಲ್ಪಿಸಲು ಕಳೆದ 2 ವರ್ಷಗಳಿಂದ ಗಂಗಾ ಕಲ್ಯಾಣ ಮಾದರಿಯಲ್ಲಿ ಪ್ರತಿ ಕೊಳವೆ ಬಾವಿಗೆ ನಿಗದಿತ ನೋಂದಣಿ ಶುಲ್ಕದೊಂದಿಗೆ ರೂ.75000.00ಗಳನ್ನು ಸಂಬಂಧಿತ ಎಸ್ಕಾಂಗಳಿಗೆ ಭರಿಸಲಾಗುತ್ತಿದೆ.<br><br>ಇಂಧನ ಇಲಾಖೆಯಿಂದ 10 ಹೆಚ್. ಪಿ ವರೆಗಿನ ಎಲ್ಲಾ ನೀರಾವರಿ ಪಂಪ್ ಸೆಟ್ ವಿದ್ಯುದೀಕರಣ ಹೊಂದಿದ ನಂತರ ಸರ್ಕಾರದ ಆದೇಶ ಸಂಖ್ಯೆ: ಇಎನ್ 55 ಪಿಎಸ್ ಆರ್ 2008, ದಿನಾಂಕ 04.09.2008 ರ ಅನುಸಾರ ಉಚಿತ ವಿದ್ಯುತ್ ನೀಡುವ ಪ್ರಕ್ರಿಯೆಗೆ ಸೇರ್ಪಡೆಗೊಳಿಸಲಾಗುವುದು.</td></tr>
<tr><td>ಆ</td><td>ಸಲ್ಲಿಕೆಯಾದ ಅರ್ಜಿಗಳಲ್ಲಿ ಎಷ್ಟು ಜನ ಫಲಾನುಭವಿಗಳಿಗೆ ನೀರಾವರಿ ಪಂಪ್ (ಐಪಿ) ಸೆಟ್‌ಗಳನ್ನು ವಿತರಿಸಲಾಗಿದೆ ಬಾಕಿ ಉಳಿದ ಅರ್ಜಿಗಳ ಸಂಖ್ಯೆ ಎಷ್ಟು,</td></tr>
<tr><td>ಇ</td><td>ನೀರಾವರಿ ಪಂಪ್ (ಐಪಿ) ಸೆಟ್‌ಗಳನ್ನು ಪಡೆದ ಫಲಾನುಭವಿಗಳಿಗೆ ಉಚಿತ ವಿದ್ಯುತ್ ನೀಡುವ ಪ್ರಕ್ರಿಯೆ ಹೇಗೆ ನಡೆಯುತ್ತದೆ;</td></tr>
<tr><td>ಈ</td><td>ಸದರಿ ಯೋಜನೆಯು ಸಣ್ಣ ಮತ್ತು ಅತಿ ಸಣ್ಣ ರೈತರಿಗಾಗಿ ಮೀಸಲಿದ್ದು ನೀರಾವರಿ ಪಂಪ್ ಸೆಟ್ ಮತ್ತು ಉಚಿತ ವಿದ್ಯುತ್ ಪಡೆಯಲು ದೊಡ್ಡ ಹಿಡುವಳಿದಾರರು ಇದರ ಪ್ರಯೋಜನ ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಬಂದಿದ್ದಲ್ಲಿ ಇದನ್ನು ತಡೆಯಲು ಸರ್ಕಾರ ತೆಗೆದುಕೊಂಡ ಕ್ರಮಗಳಾವುವು</td></tr>
</table>

ಕಡತ ಸಂಖ್ಯೆ: MID/117/LCQ/2025

(ಎನ್.ಎಸ್. ಬೋಸರಾಜು)
ಸಣ್ಣ ನೀರಾವರಿ, ಹಾಗೂ ವಿಜ್ಞಾನ ಮತ್ತು
ತಂತ್ರಜ್ಞಾನ ಸಚಿವರು.